# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 896(993) |
| 2 | ಸದಸ್ಯರ ಹೆಸರು | ಶ್ರೀ ಶಾಂತಾರಾವ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) |
| 3 | ವಿಷಯ | ಕಂದಾಯ ಗ್ರಾಮಗಳು |
| 4 | ಉತ್ತರಿಸಬೇಕಾದ ದಿನಾಂಕ | 21-09-2022 |
| 5 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಧಾರವಾಡ, ಬೆಳಗಾವಿ, ಹಾವೇರಿ ಮತ್ತು ಉತ್ತರಕನ್ನಡ ಜಿಲ್ಲೆಯ ಪ್ರವರ್ಗ-1ಕ್ಕೆ ಸೇರುವ ಧನಗರಗೌಳಿ ಸಮುದಾಯದವರು ವಾಸಿಸುವ ವಾಡಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ? (ವಿವರ ನೀಡುವುದು) | ಬೆಳಗಾವಿ ಮತ್ತು ಹಾವೇರಿ ಜಿಲ್ಲೆಯಲ್ಲಿ ಧನಗರಗೌಳಿ ಸಮುದಾಯದವರು ವಾಸಿಸುವ ವಾಡಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.<br><br>1. ಧಾರವಾಡ ಜಿಲ್ಲೆಯ ಅಳ್ನಾವರ ತಾಲ್ಲೂಕಿನ ಧನಗರಗೌಳಿ ವಾಡಿಯು<br>• ಶಿವನಗರ (ಅರವಟಗಿ ಕಾಯ್ದೆಯ ಅರಣ್ಯ ಪ್ರದೇಶ) ಹೊನ್ನಾಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿದೆ.<br>• ಲಿಂಗನಕೊಪ್ಪ (ಕುಂಬಾರಗಣವಿ ರಕ್ಷಿತ ಅರಣ್ಯಪ್ರದೇಶ) ಅರವಟಗಿ ಗ್ರಾಮ ವ್ಯಾಪ್ತಿಯಲ್ಲಿದೆ.<br><br>ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 (2007/3) ಮತ್ತು ನಿಯಮ 2008 ರ ಪ್ರಕಾರ ಈ ವಸತಿ ಪ್ರದೇಶಗಳಿಗೆ ಮಾನ್ಯತೆ ದೊರೆತಿರುವುದಿಲ್ಲ. ಈ ಎಲ್ಲಾ ಅರಣ್ಯ ವಾಸಿಗಳಿಗೆ ಸಂಬಂಧಿಸಿದ ಹೊನ್ನಾಪುರ ಗ್ರಾಮ ಪಂಚಾಯ್ತಿ ಮತ್ತು ಅರವಟಗಿ ಗ್ರಾಮ ಪಂಚಾಯತ್ ರವರು ಇತ್ತೀಚೆಗೆ ಅರಣ್ಯ ಹಕ್ಕು ಸಮಿತಿಗಳ ರಚನೆಯಾಗಿರುತ್ತದೆ. ಅದರಂತೆ 90 ದಿನದೊಳಗೆ ಸಮಿತಿಗಳು ಉಪವಿಭಾಗ ಮಟ್ಟದ ಸಮಿತಿಗೆ ಹಕ್ಕು ಮಂಡನೆ ಮಾಡುವ ಬಗ್ಗೆ ದಾಖಲೀಕರಣ ಪ್ರಗತಿಯಲ್ಲಿರುತ್ತದೆ.<br>• ಸಿಂಗನಕೊಪ್ಪ ಗೌಳಿದಡ್ಡಿ, ಕಿವಡಬೈಲ ಗೌಳಿದಡ್ಡಿ, ಅಂಬೋಳಿ ಗೌಳಿದಡ್ಡಿ ಇವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಪ್ರಸ್ತಾವನೆ ತಯಾರಿಸಲು ತಹಶೀಲ್ದಾರ್ ರವರ ಹಂತದಲ್ಲಿರುತ್ತದೆ.<br><br>2. ಉತ್ತರಕನ್ನಡ ಜಿಲ್ಲೆಯಲ್ಲಿ<br><br>1. ಮುಂಡಗೋಡು ತಾಲ್ಲೂಕಿನ ಹುನಗುಂದ ಗ್ರಾಮದ ಅತ್ತಿವೇರಿ ಹಾಗೂ ಮೈನಳ್ಳಿ ಗ್ರಾಮದ ಸುಳ್ಳಳ್ಳಿ ಮಜರೆಗಳನ್ನು ಕಂದಾಯ ಗ್ರಾಮವನ್ನಾಗಿ ರಚನೆ ಮಾಡಲು ಸರಕಾರದಿಂದ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ. |

| | | |
|---|---|---|
| | | 2. ಹಳಿಯಾಳ ತಾಲ್ಲೂಕಿನ ಗೌಳಿವಾಡ ಮಜರೆಯನ್ನು ರಾಮಲಿಂಗಾಪುರ ಕಂದಾಯ ಗ್ರಾಮವನ್ನಾಗಿ ರಚನೆ ಮಾಡಲು ಸರಕಾರದಿಂದ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.<br>3. ಯಲ್ಲಾಪುರ ತಾಲ್ಲೂಕಿನಲ್ಲಿ ಗೌಳಿ ಸಮುದಾಯದವರು ವಾಸಿಸುವ ಮಜರೆಗಳಿದ್ದು, ಸರ್ಕಾರದ ಮಾರ್ಗಸೂಚಿಗಳ ಪ್ರಕಾರ 1) ಖಾರಿವಾಡ 2) ಹೊಸೂರು 3) ತೆಂಗಿನ ಗೇರಿ 4)ಅಲಕೇರಿ ಗೌಳಿವಾಡ 5) ಜೋಗಿಕೊಪ್ಪ 6)ಮಹದೇವಕೊಪ್ಪ 7) ಕರಡೇಳಿ 8) ರಾಜಿವಾಡ ಈ ಮಜರೆಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಅರ್ಹರಿರುವುದಿಲ್ಲ. |

**ಕಂಇ 21 ಪಿಎಲ್‌ಸಿ 2022**

(ಆರ್. ಅಶೋಕ)

**ಕಂದಾಯ ಸಚಿವರು**